ಗ್ರಾಮೀಣ ರಸ್ತೆಗಳ ಸುಧಾರಣೆ

847(1125) ಡಾ : ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಂಚೋಳಿ ತಾಲ್ಲೂಕಿನ ಈ ಕೆಳಕಂಡ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

1. ಹೋಡೆಬಿರನಳ್ಳಿ ಗ್ರಾಮಕ್ಕೆ ಕೂಡುವ ರಸ್ತೆ

2. ಸುಲೇಪೇಟ–ಸೇಡಂ (ವನಮಾರಪಳ್ಳಿ–ರಾಯಚೂರು) ಮುಖ್ಯರಸ್ತೆಯಿಂದ ಗರಗಪಳ್ಳಿ ರಸ್ತೆ.

ಆ) ಹಾಗಿದ್ದಲ್ಲಿ, ಸರ್ಕಾರವು ರಸ್ತೆಗಳ ದುರಸ್ತಿಗಾಗಿ ಏನು ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಮೀಣ ರಸ್ತೆಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ಪ್ರತಿ ವರ್ಷ ವಿವಿಧ ಯೋಜನೆಗಳಡಿ ಆಯವ್ಯಯದಲ್ಲಿ ಅನುದಾನ ಒದಗಿಸಲಾಗುತ್ತಿದೆ. ಜಿಲ್ಲಾ ಪಂಚಾಯತಿಗಳಿಗೆ ಹಂಚಿಕೆಯಾಗುವ ಅನುದಾನಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ತುರ್ತು ಹಾಗೂ ಅಗತ್ಯವಾದ ರಸ್ತೆ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಿ, ಜಿ.ಪಂ. ನಲ್ಲಿ ಅನುಮೋದನೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಆದುದರಿಂದ ಪ್ರತಿ ವರ್ಷ ಜಿ.ಪಂ.ಗೆ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ರಸ್ತೆಗಳ ದುರಸ್ತಿ/ಅಭಿವೃದ್ಧಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಲಾಗುವುದು .

ಪ್ರಸ್ತುತ 2010–11ನೇ ಸಾಲಿನ ಪ್ರಕೃತಿ ವಿಕೋಪ ಯೋಜನೆಯಡಿ

1) ಹೋಡೆಬಿರಹಳ್ಳಿ ಗ್ರಾಮಕ್ಕೆ ಕೂಡುವ ರಸ್ತೆ ರಸ್ತೆಯ ಕಾಮಗಾರಿಯನ್ನು ರೂ. 21.00 ಲಕ್ಷ ಅಂದಾಜು ಮೊತ್ತದಲ್ಲಿ ಹಾಗೂ

2) ಸುಲೇಪೇಟ–ಸೇಡಂ (ವನಮಾರಪಳ್ಳಿ – ರಾಯಚೂರು) ಮುಖ್ಯ ರಸ್ತೆಯಿಂದ ಗರಗಪಳ್ಳಿ ರಸ್ತೆ ಕಾಮಗಾರಿಯನ್ನು ರೂ. 18.00 ಲಕ್ಷ ಅಂದಾಜು ಯೋಜನೆಯಡಿ ಗುಲ್ಬರ್ಗ ಜಿಲ್ಲಾಧಿಕಾರಿಗಳ ಅನುದಾನದಡಿ ಕೈಗೊಳ್ಳಲು ಪ್ರಸ್ತಾವಿಸಲಾಗಿದೆ. ಅನುಮೋದನೆ ನಿರೀಕ್ಷಿಸಿದೆ.

ಸೇಡಂ ಮತಕ್ಷೇತ್ರದಲ್ಲಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲೆ ಪ್ರಾರಂಭ

ಡಾ : **ಶರಣ ಪ್ರಕಾಶ ರುದ್ರಪ್ಪ ಪಾಟೀಲ್** (ಸೇಡಂ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೇಡಂ ಮತಕ್ಷೇತ್ರದಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ ಪದವಿಪೂರ್ವ ಕಾಲೇಜು ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಅವಶ್ಯಕತೆಯಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸದರಿ ಸ್ಥಳದಲ್ಲಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು ;

ಇ) ಪದವಿ ಪೂರ್ವ ಕಾಲೇಜು (1) ಕೋಡ್ಲಾ (2) ಕುರಕುಂಟಾ (ಸೇಡಂ ತಾಲ್ಲೂಕು) ಮತ್ತು ನಡಗುಂದಾ (ಚಿಂಚೋಳಿ ತಾಲ್ಲೂಕು) ;

ಈ) ಪ್ರೌಢಶಾಲೆ (1) ಮದಕಲ (2) ಖಂಡೇರಾಯನಹಳ್ಳಿ (3) ಬೆನಕನಳ್ಳಿ (4) ಹಂಗನಳ್ಳಿ ಮತ್ತು (5) ಹೂಡಾ (ಬಿ) ;

ಉ) ಉರ್ದು ಪ್ರೌಢಶಾಲೆ, ಮುಳಖೇಡ ಮತ್ತು (ಹೆಣ್ಣು ಮಕ್ಕಳ ಶಾಲೆ) ಸೇಡಂ (ಸೇಡಂ ತಾಲ್ಲೂಕು) ಹಾಗೂ ನಿಡಗುಂದಾ (ಚಿಂಚೋಳಿ ತಾಲ್ಲೂಕು) ?